# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಸಂಗೊಳ್ಳಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಪ್ರಭಾರ ಪಂ.ಅ.ಅ. ತಲ್ಲೂರು ಗ್ರಾಮ ಪಂಚಾಯತಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 171 ಗ್ರಾಪಂಕಾ 2016, ದಿನಾಂಕ 14.09.2016
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ/388/2016/ಎಆರ್‌ಇ-10, ದಿನಾಂಕ 22.08.2017
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 11.09.2017
4) ಶ್ರೀ ಸಂಗೊಳ್ಳಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಪ್ರಭಾರ ಪಂ.ಅ.ಅ. ತಲ್ಲೂರು ಗ್ರಾಮ ಪಂಚಾಯತಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 27.12.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಶ್ರೀ ಸಂಗೊಳ್ಳಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಪ್ರಭಾರ ಪಂ.ಅ.ಅ. ತಲ್ಲೂರು ಗ್ರಾಮ ಪಂಚಾಯತಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

"DGO illegally transferred the land measuring 50*56 ft bearing No. VPC 22 of Thallur village to Badigera Sangha free of cost causing loss to Village Panchayat, also not mentioned this matter to the Taluk Panchayat by sending the resolution copy and not taken the persmission of Taluk Panchayat as per rule 3 of the KPR(Acquisition and Disposition of Movable and immovable property by Grama Panchayats) Rules,1966. Thus the DGO, being a Government /Public servant has failed to maintain absolute integrity besides devotion to duty and acted in a manner unbecoming of a Govt servant and thus committed misconduct as enumerated U/R 3(1) of KCS(conduct) Rules, 1966."

ಮೇಲೆ ಓದಲಾದ (2) ರಲ್ಲಿ, ತನಿಖಾಧಿಕಾರಿಗಳಾದ ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ರವರು ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರು ರವರ ದಿನಾಂಕ: 22.08.2017 ರ ವರದಿಯಲ್ಲಿ ಶ್ರೀ ಸಂಗೊಳ್ಳಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಪ್ರಭಾರ ಪಂ.ಅ.ಅ. ತಲ್ಲೂರು ಗ್ರಾಮ ಪಂಚಾಯತಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಪಿಂಚಣಿಯಲ್ಲಿ ಶೇ.10 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಸದರಿ ನೌಕರರಿಗೆ ಎರಡನೇ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು.

ಮೇಲೆ ಓದಲಾದ (4) ರಲ್ಲಿ ರಂದು ಆರೋಪಿತ ನೌಕರರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ದಿನಾಂಕ 24.09.2012 ರಲ್ಲಿ ನಡೆದ ಸಭೆಯಲ್ಲಿ ಮಂಜೂರಿ ನೀಡಿದ ಜಾಗೆಯು ಶ್ರೀಮತಿ ಗಿರಿಜಾ ಚಂ ದೇಸಾಯವರ ಕಿಲ್ಲಾ ಗೋಡೆಗೆ ಹೊಂದಿಕೊಂಡಂತಹ ಅವರ ಸ್ವಂತ ಜಾಗ ಇದ್ದು, ಸದರಿಯವರ ಒಪ್ಪಿಗೆಯ ಮೇರೆಗೆ ನೀಡಿದಂತ ಜಾಗ ಇರುತ್ತದೆ. ಸದರಿ ಜಾಗ ಪಡೆದುಕೊಂಡಿರುವವರು 20-30 ವರ್ಷಗಳಿಂದ ಪಂಚಾಯತಿಗೆ ಕರ ಭರಣಾ ಮಾಡುತ್ತಾ

ಬಂದಿರುತ್ತಾರೆ. ಮತ್ತು ಸದರಿಯವರ ಹೆಸರು ಇತರೆ ಹಕ್ಕಿನಲ್ಲಿ ಮೊದಲಿನಿಂದಲೂ ದಾಖಲೆ ಇರುತ್ತದೆ. ಸದರಿ ಜಾಗವನ್ನು ಬಡಿಗೇರ ಕುಟುಂಬದವರ ವಹಿವಾಟ ಮಾಡುತ್ತಾ ಬಂದಿರುವಂತ ಜಾಗ ಇದ್ದು, ಸದರಿ ಕಾರಣದಿಂದ ಸಭೆಯಲ್ಲಿ ಠರಾವು ಮಾಡುವ ಮೂಲಕ ಮಂಜೂರಿ ನೀಡಲಾಗಿದೆ. ಆದ್ದರಿಂದ ಪಂಚಾಯತಿ ಭೂಬಾಡಿಗೆ ತುಂಬಲು ಸೂಚಿಸಿದ್ದಿದೆ. ಕಾರಣ ಮಲ್ಲನಗೌಡರ ಪಾಟೀಲರ ಹೇಳಿಕೆಯಂತೆ ಇದು ನಮ್ಮ ಗ್ರಾಮ ಪಂಛಾಯತುದ ಅಥವಾ ಸರ್ಕಾರದ ಜಾಗ ಇರುವುದಿಲ್ಲ ಅಂತಾ ಕಂಡು ಬಂದ ಕಾರಣ ಇನ್ನಿತರೆ ವಿವರ ಹಾಗೂ ಉತಾರ, ಠರಾವು ನಕಲು,ಬಡಿಗೇರ ಕುಟುಂಬದವರು ಈಗಾಗಲೇ ತುಂಬಿರುವಂತ ಕರ ಭರಣಾ ರಸೀದಿ ಜೆರಾಕ್ಸ್ ಹಾಗೂ ಮಲ್ಲನಗೌಡರ ಬ ಪಾಟೀಲ ರವರು ಈಗಾಗಲೇ ಮಾನ್ಯ ಲೋಕಾಯುಕ್ತರಿಗೆ ತಪ್ಪೊಪ್ಪಿಗೆ ಪತ್ರ ಬರೆದು ಕೊಟ್ಟಿದ್ದರ ಜೆರಾಕ್ಸ್ ನಕಲು ಕೂಡಾ ಸದರಿ ನನ್ನ ವಿನಂತಿ ಪತ್ರದ ಲಗತ್ತು ಇಟ್ಟಿರುತ್ತೇನೆ. ದೂರುದಾರರು ತಪ್ಪು ಕಲ್ಪನೆಯಿಂದ ದೂರು ನೀಡಿದ್ದು ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆ. ಆದ್ದರಿಂದ ಮಾನ್ಯ ಉಪಲೋಕಾಯುಕ್ತರ ವರಿದಿಯಲ್ಲಿನ ಶಿಫಾರಸ್ಸಿನಂತೆ ದಂಡನೆ ವಿಧಿಸಬಾರದೆಂದು ವಿನಂತಿಸುತ್ತೇನೆ."

ಸದರಿ ಪ್ರಕರಣದ ಕುರಿತು ವಿಚಾರಣೆ ನಡೆಸಲು ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ವಿಚಾರಣಾ ವರದಿಯ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ಪುನರುಚ್ಛರಿಸಿದೆ:-

> "22. The report of PW1 ExP1 shows that on 24.09.2012, Gram Panchayath has passed the resolution ti mutate the property in the name of Badigera Sangha. This fact shows that earlier the property was not standing in the name of Badigera Sangha. The report EX P1 shows that Badigera Sangha was in illegal possession of the property. The assessment register extract Ex P6 shows that the property No.22 was given to the house property and property No.22/A is given. According ro Ex P15 and 16, this property VPC No.22 is a Government property. The DGO without following any proper procedure has transferred this property measuring 50*56 ft bearing VPC No.26 of Thallur Village to badigera sangha without any consideration.
>
> Inspite of service of notice, DGO remained absent. This attitude of the DGO strengthens the contention of the Disciplinary Authority. The evidence on record remained unchallenged.
>
> The oral and documentary evidence on record clearly reveals that the DGO has illegally transferred the land measuring 50*56 ft bearing VPC No.22 of Thallur village to badigera sngha free of cost causing loss to Village panchayat and also not intimated this matter to the Taluk Panchayat by sending the reslolution copy and not taken the persmission of Taluk Panchayat as per Rule 3 pf KPR(Acquisition and Disposition of Movable and Immovable Property by Grama Panchayath) Rules, 1966.
>
> Thereby the DGO, being a Government / Public sevant has failed to maintain absolute integrity besides devotion to duty and acted in a manner unbecoming of a Government. Hence, I proceed to answer point No.1 in the affirmative."

ಸರ್ಕಾರವು ಪರಿಶೀಲಿಸಿ, ಆರೋಪದ ತೀರ್ವತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶ್ರೀ ಸಂಗೊಳ್ಳಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಪ್ರಭಾರ ಪಂ.ಅ.ಅ. ತಲ್ಲೂರು ಗ್ರಾಮ ಪಂಚಾಯತಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ರ ನಿಯಮ 214 ರನ್ವಯ ಸದರಿ ನೌಕರರಿಗೆ ಪಾವತಿಸಲಾಗುವ ಪಿಂಚಣಿಯಲ್ಲಿ ಶೇ.10 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೀ ಸಂಗೊಳ್ಳಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ ಶ್ರೀ ಸಂಗೊಳ್ಳಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಪ್ರಭಾರ ಪಂ.ಅ.ಅ. ತಲ್ಲೂರು ಗ್ರಾಮ ಪಂಚಾಯತಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ರ ನಿಯಮ 214 ರನ್ವಯ ಸದರಿ ನೌಕರರಿಗೆ ಪಾವತಿಸಲಾಗುವ ಪಿಂಚಣಿಯಲ್ಲಿ ಶೇ.10 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 700 ಗ್ರಾಪಂಕಾ 2017, ಬೆಂಗಳೂರು, ದಿನಾಂಕ: 09.04.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿನ ಶಿಫಾರಸ್ಸಿನನ್ವಯ, ಶ್ರೀ ಸಂಗೊಳ್ಳಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಪ್ರಭಾರ ಪಂ.ಅ.ಅ. ತಲ್ಲೂರು ಗ್ರಾಮ ಪಂಚಾಯತಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ರ ನಿಯಮ 214 ರನ್ವಯ ಸದರಿ ನೌಕರರಿಗೆ ಪಾವತಿಸಲಾಗುವ ಪಿಂಚಣಿಯಲ್ಲಿ ಶೇ.10 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

19/4/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
6) ಕಾರ್ಯನಿರ್ವಾಹಕ ಅಧಿಕಾರಿ, ಸವದತ್ತಿ ತಾಲ್ಲೂಕು ಪಂಚಾಯತಿ, ಸವದತ್ತಿ, ಬೆಳಗಾವಿ ಜಿಲ್ಲೆ. (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
7) ಶ್ರೀ ಸಂಗೊಳ್ಳಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಪ್ರಭಾರ ಪಂ.ಅ.ಅ. ತಲ್ಲೂರು ಗ್ರಾಮ ಪಂಚಾಯತಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
8) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.